# ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,
# ಐವಾನ್-ಎ-ಶಾಹಿ ಬಡಾವಣೆ ಕಲಬುರಗಿ

ಸಂಖ್ಯೆ: ಸಿ1(1)ಆಡಳಿತ/ಪವ್ಯ/ಬಡ್ತಿ/136/2022-23 ದಿನಾಂಕ: 16/02/2024

## ಅಧಿಸೂಚನೆ

ವಿಷಯ: ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳಿಗೆ, ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿರುವ ಹಿನ್ನಲೆಯಲ್ಲಿ ಸ್ಥಳ ನಿಯುಕ್ತಿಗೊಳಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 250 ಡಿಪಿಐ 2006 ದಿನಾಂಕ: 22/02/2008.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 464 ಡಿಪಿಐ 2008 ದಿನಾಂಕ: 06/01/2009.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022 ದಿನಾಂಕ: 28/12/2022.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: ಸಿ1(1)/ಆಡಳಿತ/ಅಜೇಪಟ್ಟಿ/127/2022-23 ದಿನಾಂಕ: 13/07/2023.
5. ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿಗಳು.
6. ಈ ಕಛೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ: 03/02/2024.

>><><><><<

ಉಲ್ಲೇಖ (4)ರ ಈ ಕಛೇರಿಯ ಅಧಿಸೂಚನೆಯನ್ವಯ ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖ (1) ಮತ್ತು (2) ರಲ್ಲಿನ ಸರ್ಕಾರದ ಆದೇಶ/ ಸುತ್ತೋಲೆಗಳನ್ವಯ ಪ್ರತ್ಯಾಯೋಜಿಸಿದ ಅಧಿಕಾರದಂತೆ ಪ್ರಸ್ತುತ, ವಿಭಾಗದಲ್ಲಿ ಖಾಲಿ ಇರುವ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗಳ ಪೈಕಿ, ಅರ್ಹರಿರುವ ಸ್ಥಳೀಯ ವೃಂದದ ಮತ್ತು ಉಳಿದ ಮೂಲ ವೃಂದದ ನೌಕರರಿಂದ, ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಲು ಉಲ್ಲೇಖ (5)ರ ದಿನಾಂಕ: 02/02/2024 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (6)ರ ಈ ಕಛೇರಿ ಜ್ಞಾಪನದನ್ವಯ ಮುಂಬಡ್ತಿ ಹೊಂದಿದ ಈ ಕೆಳಕಂಡ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಹಿನ್ನಲೆಯಲ್ಲಿ ದಿನಾಂಕ: 16/02/2024 ರಂದು ಕೌನ್ಸಿಲಿಂಗ್ ನಿಗಧಿಪಡಿಸಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಲಾಗಿತ್ತು.

ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ ಮತ್ತು ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಹಾಗೂ ಪ್ರಚಲಿತ ಸರ್ಕಾರದ ನಿಯಮಗಳು, ಜೇಷ್ಠತೆ ಹಾಗೂ ಮೀಸಲಾತಿಯನ್ವಯ ಅರ್ಹತೆ ಹೊಂದಿದ ಈ ಕೆಳಕಂಡ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರಿಗೆ ವೇತನ ಶ್ರೇಣಿ

ರೂ. **40900–1100–46400–1250–53900–1450–62600–1650–72500–1900–78200** ರಡಿಯಲ್ಲಿ ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾನಪನ್ನ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ವೃಂದ | ಸಿಬ್ಬಂದಿಯ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ | ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ |
|---|---|---|---|---|
| 1 | 114 | ಸ್ಥಳೀಯ ವೃಂದ | ಶ್ರೀ ಚನ್ನಬಸರೆಡ್ಡಿ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಯಾದಗಿರಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಶಹಾಪೂರ ಜಿ: ಯಾದಗಿರಿ. |
| 2 | 118 | ಸ್ಥಳೀಯ ವೃಂದ | ಶ್ರೀ ಹೆಚ್.ಎಂ. ಗೌರಿಶಂಕರ, ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹೂವಿನಹಡಗಲಿ ಜಿ: ವಿಜಯನಗರ |
| 3 | 122 | ಸ್ಥಳೀಯ ವೃಂದ | ಶ್ರೀ ವೈ.ಆರ್. ಭುಜಂಗಮಠ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಂಡೂರ ಜಿ: ಬಳ್ಳಾರಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕುರುಗೋಡು ಜಿ: ಬಳ್ಳಾರಿ. |
| 4 | 124 | ಸ್ಥಳೀಯ ವೃಂದ | ಶ್ರೀಮತಿ ಸಾಯಿರಾಬಾನು.ಎಂ. ಬೆಣ್ಣೂರ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿತ್ತಾಪೂರ ಜಿ: ಕಲಬುರಗಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಜೇವರ್ಗಿ ಜಿ: ಕಲಬುರಗಿ. |
| 5 | 127 | ಸ್ಥಳೀಯ ವೃಂದ | ಶ್ರೀ ಸುರೇಶ ರೆಡ್ಡಿ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಜೇವರ್ಗಿ ಜಿ: ಕಲಬುರಗಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಚಿಂಚೋಳಿ ಜಿ: ಕಲಬುರಗಿ. |
| 6 | 134 | ಸ್ಥಳೀಯ ವೃಂದ | ಶ್ರೀ ಪಿ. ಮೋಹನ ಕಿಶೋರ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಪೂರ್ವ ವಲಯ ಬಳ್ಳಾರಿ ಜಿ: ಬಳ್ಳಾರಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಬೀದರ ಜಿ: ಬೀದರ. |
| 7 | 158 | ಸ್ಥಳೀಯ ವೃಂದ | ಶ್ರೀ ಲಚ್ಚಪ್ಪ, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಹಾಪೂರ ಜಿ: ಯಾದಗಿರಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಅಫಜಲಪೂರ ಜಿ: ಕಲಬುರಗಿ. |
| 8 | 160 | ಸ್ಥಳೀಯ ವೃಂದ | ಶ್ರೀ ಅಮರೇಶ ಅಳ್ಳೊಳ್ಳಿ, ಅಧೀಕ್ಷಕರು, ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಕಲಬುರಗಿ. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಲಿಂಗಸೂಗೂರು ಜಿ: ರಾಯಚೂರು. |

| | | | | |
|---|---|---|---|---|
| 9 | 35 | ಉಳಿದ ಮೂಲ ವೃಂದ | ಶ್ರೀ ಕೆ.ಎಲ್.ನರೇಂದ್ರಬಾಬು, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮಾನ್ವಿ ಜಿ: ರಾಯಚೂರು. | ಪತ್ರಾಂಕಿತ ವ್ಯವಸ್ಥಾಪಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ದೇವದುರ್ಗ ಜಿ: ರಾಯಚೂರು. |

**ಷರತ್ತುಗಳು:**

1. ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ ಬಡ್ತಿ ಹೊಂದಿದ ಸದರಿ ಅಧಿಕಾರಿಗಳು ಯಾವುದೇ ರೀತಿಯ ವರ್ಗಾವಣೆ ಭತ್ಯೆ ಹಾಗೂ ಸೇರುವ ಕಾಲಕ್ಕೆ ಅರ್ಹರಿರುವುದಿಲ್ಲ.
2. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರ ನಿಯಮ 3 ರನ್ವಯ ಸೇವೆಯಲ್ಲಿರುವ ಅಭ್ಯರ್ಥಿಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣನಾಗದೇ ಇದ್ದಲ್ಲಿ ಮುಂಬಡ್ತಿಗೆ ಅರ್ಹನಾಗತಕ್ಕದ್ದಲ್ಲ.
3. ಸದರಿ ನೌಕರರು **ಪತ್ರಾಂಕಿತ ವ್ಯವಸ್ಥಾಪಕರು/ ಸಹಾಯಕ ನಿರ್ದೇಶಕರ** ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಕರ್ನಾಟಕ ನಾಗರಿಕ ಸೇವಾ ನಿಯಮ 42 (ಬಿ) ರನ್ವಯ ವೇತನ ನಿಗದಿಗೆ ಅರ್ಹರಿರುತ್ತಾರೆ.
4. ನಿಗಧಿಪಡಿಸಿದ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿಯ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013 ಬೆಂಗಳೂರು, ದಿನಾಂಕ: 07/06/2013 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 17 ಸೇನೌವ 2015 ದಿನಾಂಕ: 27/04/2015 ರನ್ವಯ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೆಲೆಸಿರುವ ಕಛೇರಿಗಳಿಗೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಲ್ಲಿನ ವಿವಿಧ ವೃಂದದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಮುಂಬಡ್ತಿಯನ್ನು ನೀಡಿದ್ದು, ಮುಂಬಡ್ತಿ ಹೊಂದಿರುವ ಮೇಲ್ಕಂಡ ನೌಕರರು ಮುಂಬಡ್ತಿ ಹೊಂದಿದ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಕನಿಷ್ಠ 10 ವರ್ಷಗಳವರೆಗೂ ಹೈದ್ರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ ಬೇರೆಕಡೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಒಂದು ವೇಳೆ ಕನಿಷ್ಠ ನಿಲುಗಡೆಯನ್ನು ಪೂರೈಸದೇ ಹೈದ್ರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ ಬೇರೆಕಡೆ ವರ್ಗಾವಣೆ ಹೊಂದಿದ್ದಲ್ಲಿ ನಿಯಮಾನುಸಾರ ಈ ಮುಂಬಡ್ತಿಯನ್ನು ಹಿಂಪಡೆಯಲಾಗುವುದು.
6. ಸದರಿ ನೌಕರರ ಮೇಲೆ ಶಿಸ್ತು ಪ್ರಕರಣ/ ಇಲಾಖಾ ವಿಚಾರಣೆ/ ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಇದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
7. ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರತಕ್ಕದ್ದು, ಈ ಷರತ್ತುಗಳನ್ನು ಪೂರೈಸದಿರುವ ನೌಕರರನ್ನು ಸ್ಥಾನಪನ್ನ ಮುಂಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.
8. ಈ ಹುದ್ದೆಗೆ ಮುಂಬಡ್ತಿ ನೀಡುವಾಗ ತಪ್ಪಾಗಿ ಮಾಹಿತಿಯನ್ನು ನೀಡಿದ್ದಲ್ಲಿ ಯಾವುದೇ ಮೂನ್ಸೂಚನೆ ಇಲ್ಲದೇ ಮುಂಬಡ್ತಿಯನ್ನು ಹಿಂಪಡೆಯಲಾಗುವುದು. ತಪ್ಪು ಮಾಹಿತಿ ನೀಡಿದ ನೌಕರರ ವಿರುದ್ಧ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು.
9. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೌಕರಿ ಭರ್ತಿ) ನಿಯಮಗಳು, 1977ರ ನಿಯಮ 19(3)(ಎ) ರನ್ವಯ ಮುಂಬಡ್ತಿ ಹೊಂದಿದ ವ್ಯಕ್ತಿಯು ಮುಂಬಡ್ತಿ ಹೊಂದಿದ ಹುದ್ದೆಯಲ್ಲಿ ಒಂದು ವರ್ಷದ ಸ್ಥಾನಪನ್ನ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಘೋಷಿಸಿಕೊಳ್ಳುವ ಷರತ್ತಿಗೆ ಒಳಪಟ್ಟಿರುತ್ತಾರೆ.
10. ಮುಂಬಡ್ತಿ ಹೊಂದಿದ ಅಧಿಕಾರಿ/ ನೌಕರರು ಈ ಆದೇಶದ ದಿನಾಂಕದಿಂದ 15 ದಿನಗಳ ಒಳಗಾಗಿ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು, ತಪ್ಪಿದ್ದಲ್ಲಿ

ನಿಯಮಾನುಸಾರ ಅಂತಹ ಅಧಿಕಾರಿ/ ನೌಕರರನ್ನು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು. ಮುಂದುವರೆದು, ಈ ಕುರಿತು ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಬಿಡುಗಡೆಗೊಂಡ ಹಾಗೂ ಹಾಜರಾದ ಬಗ್ಗೆ ವರದಿಗಳನ್ನು ಸಂಬಂಧಿಸಿದ ಎಲ್ಲಾ ಪ್ರಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

Digitally Signed by Dr.
Akash S
Date: 16-02-2024 18:43:30
Reason: Approved

**(ಡಾ: ಆಕಾಶ್ .ಎಸ್,** ಭಾ.ಆ.ಸೇ.**)**
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳನ್ನು:

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು–1.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1.
3. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು/ ಧಾರವಾಡ.
4. ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
5. ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
6. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
7. ಸಂಬಂಧಿಸಿದ ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ ರವರಿಗೆ.
8. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
9. ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು/ ಸಂಬಂಧಿಸಿದ ನೌಕರರಿಗೆ.
10. ಈ ಕಛೇರಿಯ ಇ–ಆಡಳಿತ ಘಟಕಕ್ಕೆ ನೀಡುತ್ತಾ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.
11. ಕಛೇರಿ ಕಡತಕ್ಕೆ.